


ಆತ್ಮವಿಶ್ವಾಸ ಭರಿಸಲು, ಅವರೆಲ್ಲ ಸೂಪರ್ ಹ್ಯೂಮನ್‌ಗಳಂತೆ ಭಾವಿಸಲು ಸೊಮೈಟಿ ಎಂದು ಹೆಸರಿಸಲಾಗಿದೆ. ಒಳಗಿರುವ ತಂತ್ರಜ್ಞಾನದಿಂದಾಗಿ ಇವು ಹಾರಬಲ್ಲವು ಮತ್ತು ಉದ್ದೇಶಿತ ಸ್ಥಳವನ್ನು ಚಲಿಸಬಲ್ಲವು.

### ಅಪರೂಪದ ಕುಟುಂಬ

ಮ್ಯಾಸ್ಕಾಟ್ ಜೋಡಿಯ ಜೊತೆ ಟ್ರ್ಯಾಕ್, ಫೀಲ್ಡ್, ಸ್ಟೇಡಿಯಂ ಮತ್ತು ಮೈದಾನಗಳಲ್ಲಿ ಕೆಲಸ ನಿರ್ವಹಿಸಲೆಂದೇ ಇನ್ನೂ ಮೂರು ಅತ್ಯಾಧುನಿಕ ರೊಬೋಗಳನ್ನು ನಿರ್ಮಿಸಲಾಗಿದೆ. ಅವುಗಳಿಗೆ ನಿರ್ದಿಷ್ಟ ಹೆಸರಿಲ್ಲವಾದರೂ ಅವು ಮಾಡುವ ಕೆಲಸಗಳಿಂದ ಅವುಗಳನ್ನು ಗುರುತಿಸಲಾಗುತ್ತದೆ.

### ಫೀಲ್ಡ್ ಸಪೋರ್ಟ್ ರೊಬೋಟ್

ಆಟೋಮ್ಯಾಟಿಕ್ ಡ್ರೈವಿಂಗ್ ಸಾಮರ್ಥ್ಯ ಹೊಂದಿರುವ ಇದು ಬಹುತೇಕ ಮೈದಾನದಲ್ಲಿ ಕೆಲಸಮಾಡುತ್ತದೆ. ಆಟಗಾರರು ಎಸೆದ ಗುಂಡು, ಭರ್ಚಿ, ಡಿಸ್ಕ್, ಹ್ಯಾಮರ್ ಮತ್ತಿತರ ಕ್ರೀಡಾ ಸಾಮಗ್ರಿಗಳನ್ನು ವಾಪಸ್ ಪ್ರಾರಂಭಿಕ ಜಾಗಕ್ಕೆ ತರುವುದು ಇದರ ಕೆಲಸ. ಎಸೆತದ ಮತ್ತು ವಸ್ತು ಬಿದ್ದಿರುವ ಜಾಗವನ್ನು ತಕ್ಷಣ ಗುರುತಿಸುವ ಈ ಯಂತ್ರಮಾನವ ಅತ್ಯಂತ ಕಡಿಮೆ ದೂರದ ದಾರಿಯನ್ನು ಕ್ರಮಿಸಿ, ವಸ್ತುವನ್ನು ಪಿಕ್ ಮಾಡಿಕೊಂಡು ಹಿಂತಿರುಗುತ್ತದೆ. ಕೆಲಸ ನಿರ್ವಹಿಸುವಾಗ, ಇನ್ನಾವುದೋ ದಿಕ್ಕಿನಿಂದ ಬೇರೊಂದು ಗುಂಡೋ ಭರ್ಚಿಯೋ ತನ್ನ ಮೇಲೆ ಬೀಳುತ್ತದೆ ಎನ್ನುವಷ್ಟರಲ್ಲಿ ಅಪಾಯವನ್ನು ಗ್ರಹಿಸಿ, ಅಲ್ಲಿಂದ ಜಾಗ ಖಾಲಿ ಮಾಡಿರುತ್ತದೆ.

### ಹ್ಯೂಮನ್ ಸಪೋರ್ಟ್ ರೊಬೋಟ್

ಇದು ಕ್ರೀಡಾಂಗಣದಲ್ಲಿ ಕುಳಿತು ಆಟ ವೀಕ್ಷಿಸುವವರ ನೆರವಿಗೆಂದೇ ತಯಾರಾಗಿರುವ ಯಂತ್ರ. ಬಾಯಾರಿದವರಿಗೆ, ಹಸಿದವರಿಗೆ ಅವರಿರುವ ಜಾಗದಲ್ಲಿಯೇ ಪಾನೀಯ ಮತ್ತು ಆಹಾರ ಕೊಂಡೊಯ್ದು ನೀಡುವ ಸಾಮರ್ಥ್ಯ ಹೊಂದಿದೆ. ಆಟದ ಮಧ್ಯೆ ಎದ್ದು ರೆಸ್ಟೋರೆಂಟ್‌ಗೆ ಹೋದರೆ ನೇರ ವೀಕ್ಷಣೆ ಮಿಸ್ ಆಗುತ್ತದೆ ಅಂದುಕೊಳ್ಳುವವರು ತಮ್ಮ ಸ್ಮಾರ್ಟ್‌ಫೋನ್ ಅಥವಾ ಟ್ಯಾಬ್‌ನಿಂದ ಆರ್ಡರ್ ಮಾಡಿದರಾಯಿತು. ಐದೇ ನಿಮಿಷದಲ್ಲಿ ಇದು ಡೆಲಿವರಿ ಬಾಯ್ ಕೆಲಸ ನಿರ್ವಹಿಸುತ್ತದೆ.

### ರಿಮೋಟ್ ಲೊಕೇಶನ್ ಕಮ್ಯುನಿಕೇಶನ್ ರೊಬೋಟ್

ವರ್ಚುಯಲ್ ರಿಯಾಲಿಟಿ ತಂತ್ರಜ್ಞಾನ ಹೊಂದಿರುವ ಇದು, ಸ್ಪರ್ಧೆಗಳನ್ನು ಕ್ರೀಡಾಂಗಣಕ್ಕೆ ಬಂದು ವೀಕ್ಷಿಸಲು ಯಾರಿಗೆ ಸಾಧ್ಯವಿಲ್ಲವೋ, ಅವರೆಲ್ಲ ಮನೆಯಲ್ಲಿ ಕೂತೇ ಆಟದ ನೈಜ ಅನುಭವ ಪಡೆಯಲು ಸಹಕರಿಸುತ್ತದೆ. ದೊಡ್ಡ ಎಲೆಕ್ಟ್ರಾನಿಕ್ ಪರದೆ ಹೊಂದಿರುವ ಇದು ಮೈದಾನದಲ್ಲಿ ನಡೆಯುವ ಮುಖ್ಯ ಚಟುವಟಿಕೆಗಳನ್ನು ನೇರವಾಗಿ ಮನೆಯ ಡ್ರಾಯಿಂಗ್ ರೂಂನಲ್ಲಿ ಕೂತವರೆದುರಿಗೆ ತೋರಿಸಿ ಆಟದಲ್ಲಿ ಪಾಲ್ಗೊಳ್ಳುವಂತೆ ಮಾಡುತ್ತದೆ. ಇದು ಎರಡು ಮೀಟರ್ ಎತ್ತರವಿದೆ.

ಇವುಗಳ ಜೊತೆ 'ಐರನ್‌ಮ್ಯಾನ್'ನನ್ನು ಹೋಲುವ THR 3 ಎಂಬ 'ಹ್ಯೂಮನ್ ಸಪೋರ್ಟ್ ರೊಬೋಟ್' ಮಿರಾಯ್‌ಟೋವ ಮತ್ತು ಸೊಮೈಟಿ ಮಾಡುವ ಕೆಲಸಗಳನ್ನು ನಕಲು ಮಾಡಿ, ಬೇಕಾದವರಿಗೆ ಸಂದೇಶ ತಲುಪಿಸುತ್ತವೆ. ಈ ಯಂತ್ರಮಾನವರನ್ನು ಟೋಕಿಯೊದ ಕ್ರೀಡಾಂಗಣ ಹಾಗೂ ನಗರದ ವಿವಿಧ ಭಾಗಗಳಲ್ಲಿ ಇಡಲಾಗಿದ್ದು, ಅವು ನಗರಕ್ಕೆ ಬರುವವರ ಮೇಲೆ ನಿಗಾ ಇಟ್ಟು, ಕ್ರೀಡಾಂಗಣಕ್ಕೆ ತೆರಳುವವರಿಗೆ ಲೊಕೇಶನ್ ಮ್ಯಾಪ್, ಟ್ಯಾಕ್ಸಿ ಸೌಲಭ್ಯ, ಕೆಫೆಟೇರಿಯಾಗಳ ಖಚಿತ ಮಾಹಿತಿ ನೀಡುತ್ತವೆ. ಇವುಗಳ ಎತ್ತರ 150 ಸೆಂ.ಮೀ. ಇದೆ.

ಟೋಕಿಯೋ ಒಲಿಂಪಿಕ್ಸ್ ಆಧುನಿಕ ತಂತ್ರಜ್ಞಾನದ ಸಮರ್ಥ ಬಳಕೆಗೆ ಸಜ್ಜಾಗಿತ್ತು. ಕ್ರೀಡಾಕೂಟ ನಡೆದಿದ್ದರೆ, ಪದಕ ಗೆಲ್ಲುವ ಆಟಗಾರರಿಗೆ ಸಿಕ್ಕಷ್ಟೇ ಮನ್ನಣೆ, ಪ್ರಚಾರ ಇವುಗಳಿಗೂ ಸಿಗುತ್ತಿತ್ತು. ಈ ರೊಬೋಗಳ ಜೊತೆಗೆ ಚಾಲಕ ರಹಿತ ಎಲ್‌ಕ್ಯೂ (ಐಕಿ) ಕಾರುಗಳೂ ಸೇವೆಗಿಳಿದಿದ್ದವು. ಜಲಜನಕ ಇಂಧನ ಬಳಸಿ ಓಡುವ ಸುಂದರ ಮಿರಾಯ್ ಕಾರು ಜನರ ಸಾಗಣೆಗೆ ಸಜ್ಜಾಗಿತ್ತು. ಆದರೆ ಕೊರೊನಾ ಸೋಂಕಿನ ಆತಂಕದಿಂದಾಗಿ 2020ರ ಒಲಿಂಪಿಕ್ಸ್ ಒಂದು ವರ್ಷ ಮುಂದಕ್ಕೆ ಹೋಗಿದೆ. 2021ರ ಜುಲೈ 23ರಂದು ಕ್ರೀಡಾಕೂಟ ಪ್ರಾರಂಭಗೊಳ್ಳುವ ನಿರೀಕ್ಷೆ ಇದೆ. ಹನ್ನೊಂದು ಸಾವಿರ ಕ್ರೀಡಾಪಟುಗಳು, 28 ಸಾವಿರ ಮಾಧ್ಯಮ ಪ್ರತಿನಿಧಿಗಳು, 80 ಸಾವಿರ ಅಧಿಕಾರಿ ಮತ್ತು ಸಿಬ್ಬಂದಿವರ್ಗ ಕ್ರೀಡಾಕೂಟದ ಯಶಸ್ಸಿಗಾಗಿ ಕೆಲಸ ಮಾಡಲಿದ್ದಾರೆ. ಮಿರಾಯ್‌ಟೋವ ಮತ್ತು ಸೊಮೈಟಿ ತಮ್ಮ ಬಳಗದ ಸದಸ್ಯರೊಂದಿಗೆ ಆ ದಿನ ಬರುವುದನ್ನೇ ಕಾಯುತ್ತಿವೆ. ಅವರ ಕರಾಮತ್ತು ನೋಡಲು ವಿಶ್ವವೂ ಕಾಯುತ್ತಿದೆ.

ಪ್ರತಿಕ್ರಿಯಿಸಿ: feedback@sudha.co.in

### ವ್ಯಾಪಾರ ಮುಂದಕ್ಕೆ

ಕ್ರೀಡಾಕೂಟದ ಪ್ರಧಾನ ಆಕರ್ಷಣೆಯಾಗಿರುವ ಮ್ಯಾಸ್ಕಾಟ್‌ಗಳ ಲೈಸೆನ್ಸಿಂಗ್‌ನಿಂದ 130 ದಶಲಕ್ಷ ಡಾಲರ್ ಹಣಗಳಿಸುವ ಅಂದಾಜು ಹೊಂದಿದ್ದ ವ್ಯವಸ್ಥಾಪಕ ಸಮಿತಿ, ರೊಬೋಗಳ ಗೊಂಬೆ, ಸ್ಟಿಕರ್, ಕೀ ಚೈನ್, ಆಟಿಕೆ, ಟೀ ಶರ್ಟ್, ಕ್ಯಾಪ್, ಹೆಡ್ ಬ್ಯಾಂಡ್‌ಗಳನ್ನು ತಯಾರಿಸಿ ವಿಶ್ವದಾದ್ಯಂತ ಮಾರಾಟ ಮಾಡುವ ಇರಾದೆ ಹೊಂದಿತ್ತು. ಕ್ರೀಡೆಯ ಪೂರ್ವ ಪ್ರಚಾರಕ್ಕೆ 'ಮೇಕ್‌ದ ಬೀಟ್' ಎಂಬ ಶೋ ನೀಡಲಿದ್ದ ರೋಬೊಗಳು, ಈ ಹಿಂದೆ ಒಲಿಂಪಿಕ್ಸ್ ಸ್ಪರ್ಧೆ ನಡೆದ ಬಾರ್ಸಿಲೋನಾ, ಪ್ಯಾರಿಸ್, ಜರ್ಮನಿ, ಅಥೆನ್ಸ್, ಲಂಡನ್, ಸ್ವಿಟ್ಜರ್‌ಲೆಂಡ್‌ಗೆ ಪ್ರವಾಸ ಹೋಗಬೇಕಿತ್ತು. ಕೊರೋನಾದಿಂದಾಗಿ ಆ ವಿಶ್ವಸಂಚಾರ ರದ್ದುಗೊಂಡಿದೆ.